# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | ಮಹಮ್ಮದ್ ಇಸ್ಮಾಯಿಲ್ | |
| ತಂದೆಯ ಹೆಸರು | ಮೊಹಮ್ಮದ್ ದಸ್ತಗಿರ್ | ಸಾಕ್ಷಿಗೆ ದಿಃ **22.03.2021** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **57** ವರ್ಷ | |
| ಉದ್ಯೋಗ | ಕೂಲಿ ಕೆಲಸ | ಪಿ.ಡಬ್ಲ್ಯೂ **-01** |
| ವಾಸ ಸ್ಥಳ | ಕ್ಯಾತಮಾರನ ಹಳ್ಳಿ, ಮೈಸೂರು | ಸಿ.ಡಬ್ಲ್ಯೂ **-01** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನನಗೆ ಮೂರು ಜನ ಹೆಣ್ಣು ಮಕ್ಕಳು, ನಾಲ್ಕು ಜನ ಗಂಡು ಮಕ್ಕಳು ಇರುತ್ತಾರೆ. ಮೃತ ರೇಷ್ಮಾ ಬಾನು ನನ್ನ ಮಗಳು ಇರುತ್ತಾಳೆ. ಆರೋಪಿಯು ನನ್ನ ಅಳಿಯ ಇರುತ್ತಾನೆ. ನನ್ನ ಮಗಳು ಸಾಯುುವ 8 ವರ್ಷದ ಹಿಂದೆ ನನ್ನ ಮಗಳು ರೇಷ್ಮಾ ಬಾನು ಇವರ ಮದುವೆಯು ಆರೋಪಿಯ ಜೊತೆಗೆ ನಡೆದಿರುತ್ತದೆ. ಆರೋಪಿತನು ನನ್ನ ಮಗಳನ್ನು ಮದುವೆ ಮಾಡಿಕೊಂಡು ನನ್ನ ಮನೆಯಲ್ಲೆ ಇದ್ದನು. ನನ್ನ ಮಗಳಿಗೆ ಆರೋಪಿಯಿಂದ ಎರಡು ಗಂಡು ಮಕ್ಕಳು, ಒಂದು ಹೆಣ್ಣು ಮಗಳು ಜನಿಸಿದರು, ನನ್ನ ಮಗಳು ಮೃತಪಟ್ಟಾಗ ನನ್ನ ಮಗಳ ಹೆಣ್ಣು ಮಗುವಿನ ವಯಸ್ಸು ಒಂದುವರೆ ತಿಂಗಳು ಇತ್ತು. ನನ್ನ ಮಗಳು ಸಾಯುವ ಎರಡು ವರ್ಷಕ್ಕಿಂತ ಮೊದಲುನಿಂದಲೂ ಆರೋಪಿತನು ನನ್ನ ಮಗಳಿಗೆ ಕಿರುಕುಳ ಕೊಡುತ್ತಿದ್ದನು.

ದಿಃ 22.07.2019 ರಂದು ಆರೋಪಿ ಮತ್ತು ನಮ್ಮ ಮಗಳು ಬೇರೆ ಮನೆ ಮಾಡಿಕೊಂಡು ಗಾಯತ್ರಿಪುರಂನಲ್ಲಿ ವಾಸವಾಗಿದ್ದರು. ಆರೋಪಿತನು ನನ್ನ ಮಗಳ ಮತ್ತು ಆತನ ತಮ್ಮ ನೌಶಾದ್ ಇಬ್ಬರ ಮಧ್ಯ ಅನೈತಿಕ ಸಂಬಂಧ ಇದೆ ಎಂದು ನನ್ನ ಮಗಳ ಮೇಲೆ ಸಂಶಯ ಪಟ್ಟು ನನ್ನ ಮಗಳಿಗೆ ಕಿರುಕುಳ ಕೊಡುತ್ತಿದ್ದನು. ಆರೋಪಿತನು ಬೇರೆ ಮನೆ ಮಾಡಿ ಮೂರು ದಿವಸದಲ್ಲೇ ನನ್ನ ಮಗಳು ಮೃತಪಟ್ಟಿರುತ್ತಾಳೆ. ದಿಃ 25.07.2019 ಮಧ್ಯಾಹ್ನ 2.00 ಗಂಟೆಗೆ ನನ್ನ ಮಗಳು ಮೃತಪಟ್ಟ ಬಗ್ಗೆ ಮನೆಯ ಮಾಲೀಕರ ಹೆಂಡತಿ ನನಗೆ ಫೋನ್ ಮಾಡಿ ತಿಳಿಸಿದರು. ನನ್ನ ಮಗಳ ಹತ್ತಿರ ಇರುವ ಫೋನ್ ನಲ್ಲಿ ನನ್ನ ನಂಬರ್ ಇತ್ತು ಅದನ್ನು ನೋಡಿ ಅವರು ನನಗೆ ಫೋನ್ ಮಾಡಿರುತ್ತಾರೆ. ನನ್ನ ಮಗಳಿಗೆ ರಕ್ತ ಬರುತ್ತಿದ್ದೆ ಎಂದು ಫೋನ್ ಮಾಡಿ, ಬರಲು ನನಗೆ ತಿಳಿಸಿದರು, ನಾನು, ನನ್ನ ಹೆಂಡತಿ ಮತ್ತು ನನ್ನ ಮಗಳು ತಕ್ಷಣ ಸ್ಥಳಕ್ಕೆ ಹೋದೆವು, ನಾವು ಸದರಿ ಮನೆಗೆ ಹೋದಾಗ ಮನೆಯಲ್ಲಿ ನನ್ನ ಮಗಳು ಮೃತಪಟ್ಟಿದ್ದಳು ಅವಳ ಒಂದುವರೆ ತಿಂಗಳು ಮಗು ಅಲ್ಲೇ ಇತ್ತು. ಉಳಿದ ಮಕ್ಕಳು ಶಾಲೆಗೆ ಹೋಗಿದ್ದರು. ನಾನು ಶಾಲೆಗೆ ಹೋಗಿ ಮಕ್ಕಳನ್ನು ಕರೆದುಕೊಂಡು ಬಂದೆನು. ನಾನು ನನ್ನ ಮೊಮ್ಮಗಳು ಸುಹೇಬಿಯಾ ಬಾನು ಚಾಸಾ-11 ಇವರಿಗೆ ಘಟನೆಯ ಬಗ್ಗೆ ಕೇಳಿದಾಗ ಅವಳು ದಿಃ 24.07.2019 ರ ರಾತ್ರಿ ಆರೋಪಿ ಮತ್ತು ಆತನ ಸಹೋದರ ಶಮ್ಮು ಇವರು ನನ್ನ ಮಗಳಿಗೆ ಕಿರುಕುಳ ಕೊಟ್ಟ ಬಗ್ಗೆ ತಿಳಿಸಿದರು. ನನ್ನ ಮಗಳನ್ನು ಕುರ್ಚಿಗೆ ಕಟ್ಟಿ, ಹಲ್ಲೆ ಮಾಡಿದ ಬಗ್ಗೆ ಹೇಳಿದರು. ಚಾಸಾ-11 ರವರು ತನ್ನ ಮುಂದೆ ಆರೋಪಿತನು ತನ್ನ ತಾಯಿಗೆ ಅಕ್ರಮ ಸಂಬಂಧ ಇದೆ ಎಂದು ಕುರ್ಚಿಗೆ ಕಟ್ಟಿ ಹಲ್ಲೆ ಮಾಡಿ ಕಿರುಕುಳ ಕೊಟ್ಟ ಬಗ್ಗೆ ತಿಳಿಸಿರುತ್ತಾರೆ. ಆರೋಪಿತರು ಕುರ್ಚಿಗೆ ಕಟ್ಟಿ ಹಲ್ಲೆ ಮಾಡಿದ ನಂತರ ಮಕ್ಕಳೇ ಹಗ್ಗವನ್ನು ಬಿಚ್ಚಿರುತ್ತಾರೆ ಎಂದು ಹೇಳಿರುತ್ತಾರೆ. ನಂತರ ಅವರು ಅಲ್ಲೇ ಮಲಗಿಕೊಂಡಿರುತ್ತೇವೆ ಎಂದು ಹೇಳಿರುತ್ತಾರೆ. ಮಕ್ಕಳು ಮುಂಜಾನೆ ಶಾಲೆಗೆ ಹೋದ ನಂತರ, ಆರೋಪಿತನು ನನ್ನ ಮಗಳಿಗೆ ಕೊಲೆ ಮಾಡಿರುತ್ತಾನೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಫಿರ್ಯಾಧಿ ಕೊಟ್ಟಿರುತ್ತೇನೆ. ಫಿರ್ಯಾಧಿಯನ್ನು ನಿಪಿ-1 ಎಂದು, ಅದರ ಮೇಲಿನ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಪೊಲೀಸರು ಮನೆಗೆ ಬಂದು ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಸಾಕ್ಷಿಯು ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು, ಸಾಕ್ಷಿಯು ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು

ಗುರುತಿಸಲಾಯಿತು. ಸ್ಥಳದ ಪಂಚನಾಮೆಯನ್ನು ಸಾಯಂಕಾಲ 5.00 ಗಂಟೆಯವರೆಗೆ ಮಾಡಿರುತ್ತಾರೆ, ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿರುತ್ತಾರೆ.

**ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-**

ತಮ್ಮ ಸೀನಿಯರ್ ವಕೀಲರು ಔಟ್ ಆಫ ಸ್ಟೇಷನ್ ಇದ್ದಾರೆ ಎಂದು, ಕಾರಣ ಹೇಳಿ ಸಮಯ ಕೋರಿದ್ದು. ಸಕಾರಣ ವಿಲ್ಲದೇ ಸಮಯ ಕೇಳಿದ್ದರಿಂದ, ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮತ್ತು ಎಮ್.ಎ.ಸಿ.ಟಿ.ಮೈಸೂರು